ನನಗೆ ಪತ್ರ ಬರೆದಿದ್ದಾರೆ. ಅದರ ಸಲುವಾಗಿ ಚಳುವಳಿ ಬೇರೆ ನಡೆದಿದೆ. ಕೆಲವರನ್ನು ಅರೆಸ್ಟ್ ಮಾಡಿಕೊಂಡು ತೆಗೆದುಕೊಂಡು ಹೋಗಿದ್ದಾರೆ. ಹೀಗೆಲ್ಲಾ ಆದಮೇಲೆಯೂ ಕೂಡ ಸರಕಾರಕ್ಕೆ ಈ ಬಗ್ಗೆ ಗೊತ್ತಿಲ್ಲ ಎಂದು ಹೇಳಿದರೆ. ಈ ಸರಕಾರದ ಯಂತ್ರ ಚಲಿಸುತ್ತಿದೆಯೋ ಅಥವಾ ನಿಂತು ಹೋಗಿದೆಯೋ ಎಂದು ತಾವು ಹೇಳಬೇಕು. ಇದಕ್ಕೆ ತಾವು ಚಲಿಸುತ್ತಿದೆ ಎಂದು ಹೇಳ ಬಹುದು. ಎರಡನೆಯದಾಗಿ ಇವೊತ್ತಿನ ದಿವಸ ತಮ್ಮ ಗಮನಕ್ಕೆ ಈ ವಿಷಯವನ್ನು ಸ್ಪೆಸಿಫಿಕ್ ಆಗಿ ತಂದಿದ್ದೇನೆ. ಈಗ ಸ್ಪಷ್ಟವಾಗಿ ರೈತರು ಸಾಗುವಳಿ ಮಾಡುತ್ತಿರುವ ಭೂಮಿಯಲ್ಲಿ ನೀಲಗಿರಿ ಮರಗಳನ್ನು ಒತ್ತಾಯದ ಮೂಲಕ ನೆಡುವುದಿಲ್ಲ ಎಂದು ಒಂದು ಸ್ಪಷ್ಟವಾದ ಭರವಸೆಯನ್ನು ನಮಗೆ ಕೊಡುತ್ತೀರಾ ? ಪರಿಶೀಲಿಸುತ್ತೇನೆ, ನೋಡುತ್ತೇನೆ ಎಂದು ಹೇಳುವುದು ಬೇಡ. ಚೂಸ್ತಾಮನ್, ಚೇಸ್ತಾಮ ಬೇಡ.

ಶ್ರೀ ಜೆ. ಎಸ್. ದೇಶ್‌ಮುಖ್.—ನಾವು ರೈತರು ಸಾಗುವಳಿ ಮಾಡಿರುವ ಭೂಮಿಯಲ್ಲಿ ರೈತರಿಗೆ ಯಾವುದೇ ರೀತಿಯಿಂದ ನೀಲಗಿರಿಯನ್ನು ಬೆಳಯುವುದಕ್ಕೆ ಒತ್ತಾಯ ಮಾಡುವುದಿಲ್ಲ. ಆದರೆ ರೈತರು ತಾವಾಗಿಯೇ ಬೆಳೆಯಲು ಮುಂದೆ ಬಂದರೆ ನಾವು ಗಿಡಗಳನ್ನು ಕೊಡಬೇಕಾಗುತ್ತದೆ. ಒತ್ತಾಯವನ್ನು ಮಾಡಿಲ್ಲ, ಮಾಡುವುದೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಶಿವಮೊಗ್ಗ, ಭದ್ರಾವತಿ, ತುಮಕೂರು, ಚಿತ್ರದುರ್ಗ ಮುಂತಾದ ಕಡೆಗಳಲ್ಲಿ ಹೀಗೆ ಒತ್ತಾಯ ನಡೆದಿದೆ ಎಂದು ತಮ್ಮ ಅಮಗಾಹನೆಗೆ ತಂದಿದ್ದೇನೆ. ತಾವುಗಳು ತಮ್ಮ ಇಲಾಖಾ ಅಧಿಕಾರಿಗಳನ್ನು ಕೇಳಿ. ಅಂತಹ ಸಾಗುವಳಿ ಮಾಡಿರುವ ಪ್ರದೇಶಗಳಲ್ಲಿ ನೀಲಗಿರಿ ನೆಡುವುದಿಲ್ಲ ಎಂದು ತಾವುಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಜೆ. ಎಸ್. ದೇಶ್‌ಮುಖ್.—ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂತಹ ನಿರ್ದಿಷ್ಟವಾದ ವಿವರಗಳನ್ನು ತಾವುಗಳು ಕೊಟ್ಟರೆ ಖಂಡಿತವಾಗಿ ಹಾಗೆ ಒತ್ತಾಯ ಮಾಡದಂತೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಒತ್ತಾಯ ಮಾಡಿದ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಒಂದು ಪ್ರಶ್ನೆ ಇದೆ, ನನಗೆ ಅವಕಾಶ ಕೊಡಿ.....

ಅಧ್ಯಕ್ಷರು.—ಈಗ ಅವಕಾಶವಿಲ್ಲ.

ಮುಧೋಳ ತಾಲ್ಲೂಕು ಸವಿೂರವಾಡಿ ಸಕ್ಕರೆ ಕಾರ್ಖಾನೆ ಮಾರಾಟ ಕುರಿತು

೭೦(೨೫೦) ಶ್ರೀ ಬಿ. ಜಿ. ಜಮಖಂಡಿ (ಮುಧೋಳ).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಮುಧೋಳ ತಾಲ್ಲೂಕು ಸವಿೂರವಾಡಿ (ಸೈದಾಪುರ) ದಿ. ಸೋಮಯ್ಯ ಸಕ್ಕರೆ ಕಾರ್ಖಾನೆಯನ್ನು ಮಾರಾಟ ಮಾಡುವ ಬಗ್ಗೆ ಸಂದಾನ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕಾನೂನು ಪ್ರಕಾರ ಸರ್ಕಾರದವರು ಕ್ರಮಗಳನ್ನೇನಾದರೂ ಕೈಗೊಂಡಿರುವರೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಈ ಬಗ್ಗೆ ಸರ್ಕಾರಕ್ಕೆ ಯಾವುದೇ ವಿಧವಾದ ಮಾಹಿತಿ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಈ ತರಹದ ಸಂಧಾನಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಯಾರಾದರೂ ಪ್ರೈವೇಟ್‌ನವರು ವ್ಯಾಪಾರ ಮಾಡುವವರು, ಅವರಿಗೆ ತಿಳಿದ ಹಾಗೆ ಅವರು ಮಾರಾಟ ಮಾಡುತ್ತಾರೆ. ಆನ್‌ಲೆಸ್ ಸಮ್, ಇರ್‌ರೆಗ್ಯೂಲೆರಿಟೀಸ್ ಕಮಿಟೆಡ್, ಅಂತಹವುಗಳು ನಮ್ಮ ಗಮನಕ್ಕೆ ಬರುವುದಿಲ್ಲ. ಕಾನೂನು ಪ್ರಕಾರ ಏನಾದರೂ ಕ್ರಮಗಳನ್ನು ಕೈಗೊಂಡಿದ್ದೀರಾ ಎಂದು ಹೇಳಿದ್ದಾರೆ. ಇಲ್ಲಿ ಆ ಪ್ರಶ್ನೆ ಬರುವುದಿಲ್ಲ. ಆ ಸಂಸ್ಥೆಯವರು ಮಾರಾಟ ಮಾಡುವುದಿಲ್ಲ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ

ಶ್ರೀ ಬಿ. ಜಿ. ಜಮಖಂಡಿ.—ಇದು ಖಾಸಗಿ ರಂಗದಲ್ಲಿರುವಂತಹ ಒಂದು ದೊಡ್ಡ ಉದ್ದಿಮೆ. ಇದಕ್ಕೆ ಹೊಂದಿಕೊಂಡು ಸುಮಾರು ೧.೨೦೦ ಎಕರೆ ಪ್ರದೇಶ ಕಬ್ಬು ಬೆಳೆಯು ತಕ್ಕಂಥಾದ್ದು ಇದೆ. ವರ್ಷಕ್ಕೆ ಐದು ಲಕ್ಷ ಟನ್‌ಗಳಷ್ಟು ಸಕ್ಕರೆಯನ್ನು ಉತ್ಪಾದನೆ ಮಾಡತಕ್ಕಂಥ ಒಂದು ಸಂಸ್ಥೆ ಇದಾಗಿದೆ. ಇದೊಂದು ದೊಡ್ಡ ಸಂಸ್ಥೆ, ಒಂದು ವೇಳೆ ಇದನ್ನು ವಹಿವಾಟು ಮಾಡುವುದಿಲ್ಲ ಎಂದರೆ, ಓನರ್‌ಶಿಪ್ ಚೇಂಜ್ ಆಗಬಹುದು ಎಂಬುದಾಗಿ ವಿಶ್ವಾಸನೀಯ ಮೂಲಗಳಿಂದ ತಿಳಿದು ಬಂದಿದೆ. ಏಕೆಂದರೆ ಇವರು ಖಾಸಗಿ ರಂಗದವರು ಇದ್ದರೂ ಸಹಿತ ನಮ್ಮ ರೈತರಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಡುವಂತಹ ಪರಿಸ್ಥಿತಿ ಅಲ್ಲಿ ಬಂದಿದೆ. ಇದರ ಸಲುವಾಗಿ ಅಲ್ಲಿ ಈಗಾಗಲೇ ರೈತರು ಮೊರ್ಚಾ, ಸತ್ಯಾಗ್ರಹ ಮಾಡಿದ್ದಾರೆ. ಒಂದು ವೇಳೆ ಅಲ್ಲಿ ಓನರ್‌ಶಿಪ್ ಚೇಂಜ್ ಮಾಡಿದರೆ ಅಥವಾ ವಹಿವಾಟು ಮಾಡಿದರೆ ಸರಕಾರದವರು ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎನ್ನುವುದು ಮುಖ್ಯವಾಗಿದೆ. ಆಕಸ್ಮಾತ್ ಸರಕಾರ ಸೂಕ್ತವಾದ ಕಾರ್ಯಕ್ರಮವನ್ನು ಸರಿಯಾಗಿ ಕೈಗೊಳ್ಳದಿದ್ದರೆ ಒಂದು ವ್ಯವಸ್ಥೆಯನ್ನು ಮಾಡದಿದ್ದರೆ, ಅದನ್ನು ನಡೆಸುವಂತಹ ಒಂದು ಸಾಮರ್ಥ್ಯವನ್ನು ನಮ್ಮ ಸಹಕಾರಿ ವಲಯದ ಅಲ್ಲಿಯ ಜನರು ಹೊಂದಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರು ತಮ್ಮ ಉತ್ತರವನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಅವರು ಈಗ ಸಂಸ್ಥೆಯನ್ನು ವಹಿವಾಟು ಮಾಡುತ್ತಾ ಇಲ್ಲ. ಎರಡನೆಯದಾಗಿ ಮಾನ್ಯ ಸದಸ್ಯರಿಗೆ ಅಂತಹ ವಿಚಾರವು, ಅವರ ಗಮನಕ್ಕೆ ಬಂದಿದ್ದರೆ, ನಾವು ರೈತರ ಹಿತರಕ್ಷಣೆಗೋಸ್ಕರವಾಗಿ ಕಾನೂನು ಪ್ರಕಾರ ಹಿತರಕ್ಷಣೆ ಮಾಡುವುದಕ್ಕೆ ಸಾಧ್ಯವಿದೆ. ಬೆಲೆ ಫಿಕ್ಷೇಷನ್, ಅಥವಾ ಅವರಿಗೆ ಕೊಡಬೇಕಾದ ಹಣ ಕೊಡುವ ಬಗ್ಗೆ ನಾವು ನೋಡಿ ಕೊಳ್ಳಬಹುದು. ಹೊರತಾಗಿ, ವಹಿವಾಟು ಮಾಡಬೇಡಿ ಎಂದು ನಾವು ಹೇಳುವ ಹಾಗಿಲ್ಲ. ನಮಗೆ ಬಂದಿರುವ ರಿಪೋರ್ಟಿನ ಪ್ರಕಾರ ಕಳೆದ ಎರಡು ವರ್ಷ ಗಳಿಂದ ಅಲ್ಲಿ ಚೆನ್ನಾಗಿ ಕಬ್ಬನ್ನು ಕ್ರಷ್ ಮಾಡಿದ್ದಾರೆ. ಅಲ್ಲದೆ ಅವರು ಪ್ರಾಫಿಟ್ ಮಾಡಿದ್ದಾರೆ. ಆದ್ದರಿಂದ ಈ ಕಾರ್ಖಾನೆಯನ್ನು ಮೊರಾಟ ಮಾಡುವ ಒಂದು ಪರಿಸ್ಥಿತಿಯಲ್ಲಿ ಇಲ್ಲ. ಇನ್ನು ಮಾನ್ಯ ಸದಸ್ಯರು ಹೇಳಿದ ಉಳಿದ ಎರಡು ಸಲಹೆಗಳನ್ನು ಅಂತಹ ಒಂದು ಪರಿಸ್ಥಿತಿಯು ಬಂದಾಗ ನಾನು ಪರಿಶೀಲನೆ ಮಾಡುತ್ತೇನೆ.

ನಾಗರಹೊಳೆ ಹಾಗೂ ಬಂಡೀಪುರ ಅರಣ್ಯಗಳಲ್ಲಿ ದಂತಕ್ಕಾಗಿ ಆನೆಗಳ ಹತ್ಯೆ

೭೧ (೧೮೮) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಳೆದ ೫ ವರ್ಷಗಳಲ್ಲಿ ನಾಗರಹೊಳೆ ಮತ್ತು ಬಂಡೀಪುರ ಅರಣ್ಯದಲ್ಲಿ ದಂತಕ್ಕಾಗಿ ಹತ್ಯೆ ಮಾಡಲ್ಪಟ್ಟಿರುವ ಆನೆಗಳ ಸಂಖ್ಯೆ ಎಷ್ಟು ?

ಆ) ಕಳ್ಳತನವಾದ ದಂತಗಳ ಬೆಲೆಯು ಮೊತ್ತವೆಷ್ಟು ?

ಇ) ಆನೆಗಳ ಹತ್ಯೆ ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೆ. ಎಸ್. ದೇಶಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ವಿವರಗಳು ಈ ಕೆಳಗಿನಂತಿವೆ

ವರ್ಷ	ನಾಗರಹೊಳೆ	ಬಂಡೀಪುರ
೧೯೮೨–೮೩	೨	೦
೧೯೮೩–೮೪	೦	೦
೧೯೮೪–೮೫	೦	೦
೧೯೮೫–೮೬	೦	೩
೧೯೮೬–೮೭	೦	೪
	೫	೧೦

ಆ) ಆನೆಗಳ ದಂತಗಳು ಕಳುವಾಗಿರುವುದರಿಂದ ಅವುಗಳ ಬೆಲೆಗಳನ್ನು ನಿಗದಿಪಡಿಸಲು ಸಾಧ್ಯವಾಗುವುದಿಲ್ಲ.